ಬಂದು ಅಮ್ಮನ ಕೆಚ್ಚಲಿನ ಹಾಲು ಕುಡಿಯುತ್ತಿದ್ದವು. ಇದು ಪ್ರತಿದಿನ ನಡೆಯುತ್ತಿದ್ದ ಪದ್ಧತಿ.

ಆದರೂ ಆ ಪಶುಪಾಲಕನಿಗೆ ಕೆಲವು ಕಷ್ಟಗಳಿದ್ದವು. ಅವನು ಸದಾ ಆತಂಕಕ್ಕೆ ಒಳಗಾಗುತ್ತಿದ್ದ ಸಂಗತಿ ಒಂದಿತ್ತು. ಅದೇ ಕಾಡಿನಲ್ಲಿ ವಾಸವಾಗಿದ್ದ ಒಂದು ಹೆಬ್ಬುಲಿ ಕಾಟ ಕೊಡುತ್ತಿತ್ತು. ಕಾಡಿನ ಮಧ್ಯದಲ್ಲಿ ಇದ್ದ ಹುಲ್ಲುಗಾವಲಿನಲ್ಲಿ ಹಸುಗಳು ಮೇಯುವಾಗ ಪೊದೆಯಲ್ಲಿ ಅಡಗಿ ಹುಲಿ ಹೊಂಚು ಹಾಕುತ್ತಿತ್ತು. ಹಸುಗಳ ಒಡೆಯ ಕೊಳಲು ನುಡಿಸುತ್ತಾ ಮೈಮರೆಯುತ್ತಿದ್ದ. ಆ ಸಂದರ್ಭದಲ್ಲಿ ದಿಢೀರನೆ ದಾಳಿ ಮಾಡುತ್ತಿದ್ದ ಹುಲಿ ಹಸುವನ್ನು ಎತ್ತೊಯ್ಯುತ್ತಿತ್ತು. ಹೀಗೆ ವಾರಕ್ಕೊಂದು, ತಿಂಗಳಿಗೊಂದು ಹಸು ಹುಲಿಯ ಬಾಯಿಗೆ ಬೀಳುತ್ತಿತ್ತು. ಇದರಿಂದ ಹಸುಗಳ ಸಂಖ್ಯೆಯೂ ಕಡಿಮೆಯಾಗುತ್ತಾ ಬಂತು. ಪಶುಪಾಲಕನಾದ ಒಡೆಯ ತುಂಬಾ ಚಿಂತಿತನಾದ. ಇದಕ್ಕೇನು ಪರಿಹಾರ ಎಂದು ಯೋಚಿಸಿ ಕಡೆಯಲ್ಲಿ ಒಂದು ನಿರ್ಧಾರಕ್ಕೆ ಬಂದ. ಅವನಲ್ಲಿ ಬಿಲ್ಲು ಬಾಣವಿತ್ತು. ಕಾಡಿನಲ್ಲಿ ತನ್ನ ರಕ್ಷಣೆಗಾಗಿ ಅದನ್ನು ಇಟ್ಟುಕೊಂಡಿದ್ದ. ಬಾಣದ ತುದಿಗೆ ವಿಷವನ್ನು ಲೇಪಿಸಿ ಗುರಿ ಇಟ್ಟು ಹೊಡೆದರೆ ಯಾರೇ ಆದರೂ ಅರೆಗಳಿಗೆಯಲ್ಲಿ ಸಾಯುತ್ತಿದ್ದರು. ಆ ವಿಷಪೂರಿತ ಬಾಣವನ್ನು ಬಳಸಲು ಅವನು ತೀರ್ಮಾನಿಸಿದ. ದನಗಳು ಹುಲ್ಲುಗಾವಲಿನಲ್ಲಿ ಮೈಮರೆತು ಮೇಯುತ್ತಿದ್ದವು. ಅಂದು ಅವನು ತನ್ನ ಮಧುರವಾದ ಕೊಳಲನ್ನು ನುಡಿಸಲಿಲ್ಲ. ಬದಲಾಗಿ ಬಿಲ್ಲು ಬಾಣವನ್ನು ಹೆಗಲಿಗೇರಿಸಿ ಎತ್ತರದ ಬಂಡೆ ಏರಿದ. ನೆಟ್ಟ ದೃಷ್ಟಿಯಿಂದ ಎದುರಿನ ದಟ್ಟ ಪೊದೆಗಳನ್ನು ನೋಡುತ್ತಾ ಕುಳಿತ. ಅಷ್ಟರಲ್ಲಿ ಕೆಳಗಿನ ಪೊದೆಯಲ್ಲಿ ಸರಸರ ಸದ್ದು ಕೇಳಿಸಿತು. ಪೊದೆಯ ಎಲೆಗಳು ಅಲ್ಲಾಡತೊಡಗಿದವು. ಹುಲಿ ಹತ್ತಿರದಲ್ಲೇ ಇದೆ ಎಂಬುದು ಖಚಿತವಾಗಿ ಅವನ ಎದೆ ಹೊಡೆದುಕೊಳ್ಳತೊಡಗಿತು. ಪೊದೆಯ ಹೊರಗೆ ಹುಲಿಯ ಬಾಲದ ತುದಿ ಮಾತ್ರ ಕಾಣುತ್ತಿತ್ತು. ಅವನಿಗೆ ಹುಲಿ ಅಡಗಿರುವುದು ಇನ್ನಷ್ಟು ಖಚಿತವಾಯಿತು. ಹುಲಿ ತನ್ನ ಬೇಟೆಗಾಗಿ ಹೊಂಚು ಹಾಕುತ್ತಾ ಕುಳಿತಿದೆ. ಅದನ್ನು ಕೊಲ್ಲಲು ಇದೇ ಸರಿಯಾದ ಸಮಯ ಎಂದು ಭಾವಿಸಿದ ಹಸುಗಳ ಒಡೆಯ ಬಿಲ್ಲನ್ನು ಎದೆಗೇರಿಸಿ ಗುರಿ ಇಟ್ಟು ಬಾಣ ಹೊಡೆದ. ಬಿಲ್ಲಿನಿಂದ ಚಿಮ್ಮಿದ ಬಾಣ ಕ್ಷಣ ಮಾತ್ರದಲ್ಲಿ ಪೊದೆಯನ್ನು ಭೇದಿಸಿ ಒಳ ನುಗ್ಗಿತು. ತಕ್ಷಣವೇ ಪೊದೆಯೊಳಗಿಂದ ಗುರುಗುಟ್ಟಿ ಅಬ್ಬರಿಸಿದ ಸದ್ದು ಹೊರಬಂತು. ಆ ಸದ್ದಿಗೆ ಸುತ್ತಲ ಕಾಡಿಗೆ ಕಾಡೇ ಮರುದನಿಗೈದಿತು. ಅವನು ನಿಂತಿದ್ದ ಬಂಡೆಯೂ ಒಮ್ಮೆ ನಡುಗಿದಂತಾಯಿತು. ಅವನು ನೋಡನೋಡುತ್ತಿದ್ದಂತೆ ಹೆಬ್ಬುಲಿ ಪೊದೆಯಿಂದ ಚಿಮ್ಮಿ ಈಚೆ ನೆಗೆಯಿತು. ಆ ಹೆಬ್ಬುಲಿಯ ಹಿಂದೆ ಐದು ಮರಿಗಳೂ ಹೊರನುಗ್ಗಿದವು. ಅಲ್ಲಿ ಒಂದು ಅಚಾತುರ್ಯವಾಗಿತ್ತು. ಪಶುಪಾಲಕ ಹೊಡೆದ ಬಾಣ ದೊಡ್ಡ ಹುಲಿಗೆ ನಾಟುವ ಬದಲು ಒಂದು ಪುಟ್ಟ ಹುಲಿಮರಿಗೆ ನಾಟಿತ್ತು. ಅಮ್ಮನ ಜೊತೆ ಪೊದೆಯಿಂದ ಹೊರಬಂದ ಹುಲಿ ಮರಿ ವಿಲವಿಲ ಒದ್ದಾಡುತ್ತಾ ಕಾಡಿಗೆ ಕಾಡೇ ಕಣ್ಣೀರು ಹಾಕುವಂತೆ ಚೀತ್ಕರಿಸುತ್ತಿತ್ತು. ಈ ಅನಿರೀಕ್ಷಿತ ಘಟನೆಯಿಂದ ಕಂಗೆಟ್ಟ ಹುಲಿ ತನ್ನ ಕಂದನನ್ನು ಉಳಿಸಿಕೊಳ್ಳಲು ಅದರ ಮುಖವನ್ನು ನೆಕ್ಕುತ್ತಾ, ತನ್ನ ಕಾವಿಗಳಿಂದಲೇ ಅದನ್ನು ಎತ್ತಿಕೊಳ್ಳುತ್ತಾ ದುಃಖ ವ್ಯಕ್ತಪಡಿಸಿತು. ಆದರೆ, ಬಾಣದ ವಿಷ ಮೈಯ್ಯೆಲ್ಲಾ ಹರಡಿ ಹುಲಿಮರಿ ಸತ್ತುಹೋಯಿತು. ಯಾವಾಗ ತನ್ನ ಮುದ್ದು ಮರಿ ಬದುಕಲಿಲ್ಲವೋ ಹುಲಿಯ ಕೋಪ ನೆತ್ತಿಗೇರಿತು. ಕೆಂಡದ ಉಂಡೆಯಂಥ ತನ್ನ ಕಣ್ಣು ಗುಡ್ಡೆಗಳನ್ನು ಹೊರಳಿಸುತ್ತಾ ಸುತ್ತಲೂ ನೋಡಿತು. ಯಾರೂ ಕಾಣಲಿಲ್ಲ. ಆದರೆ, ಅದರ ಮೂಗಿಗೆ ಮನುಷ್ಯನ ವಾಸನೆ ಬಡಿಯಿತು. ಕತ್ತು ಮೇಲೆತ್ತಿ ನೋಡಿತು. ಅಲ್ಲಿ ಮನುಷ್ಯನೊಬ್ಬ ಬಿಲ್ಲು ಬಾಣ ಹಿಡಿದು ನಿಂತಿದ್ದಾನೆ! ಇವನೇ ತನ್ನ ಮಗುವನ್ನು ಬಲಿ ತೆಗೆದುಕೊಂಡ ಕ್ರೂರ ಮನುಷ್ಯ ಎಂಬುದು ಅದಕ್ಕೆ ಖಚಿತವಾಯಿತು. ಸಿಟ್ಟಿನಿಂದ ಎಗರಿ ಬಂಡೆ ಏರಲು ಪ್ರಯತ್ನಿಸಿತು. ಆದರೆ ಬಂಡೆ ತುಂಬ ಕಡಿದಾಗಿದ್ದರಿಂದ ಸಾಧ್ಯವಾಗಲಿಲ್ಲ. ಅಸಹಾಯಕವಾದರೂ ಅದರ ಸೇಡು ಕಡಿಮೆಯಾಗಲಿಲ್ಲ. ಅವನು ಬಂಡೆಯಿಂದ ಇಳಿಯುವುದನ್ನೇ